# ಶಾಲೆಯ ಆವರಣಕ್ಕೆ ಬೇಲಿ,
# ಸಾಮಾಜಿಕ ಕಳಕಳಿ ಮೆರೆದ ಶೌರ್ಯ ತಂಡ

**ಕುಂದಾಪುರ, ಮಾರ್ಚ್ *01, 2025:* ಕುಂದಾಪುರ ತಾಲ್ಲೂಕಿನ ಇರಿಗೆ, ಹಳ್ಳಿಹೊಳೆಯ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ ಬೇಲಿ ರಚನೆ ಮಾಡಿಕೊಡುವ ಮೂಲಕ ಸಾಮಾಜಿಕ ಪ್ರಜ್ಞೆ ಮೆರೆದಿದ್ದಾರೆ ಶೌರ್ಯ ಶ್ರೀ ಧರ್ಮಸ್ಥಳ ಕಮಲಶಿಲೆ ಘಟಕದ ಸ್ವಯಂಸೇವಕರು.**

**ಶಾಲೆಯ ಶಿಕ್ಷಕರು ಬೇಲಿ ರಚಿಸಿಕೊಡುವ ಬಗ್ಗೆ ಸ್ವಯಂಸೇವಕರ ತಂಡಕ್ಕೆ ಮನವಿ ಮಾಡಿಕೊಂಡಿದ್ದರು. ಸ್ಪಂದಿಸಿದ ಸ್ವಯಂಸೇವಕರು ಶ್ರಮದಾನದ ಮೂಲಕ ಬೇಲಿ ರಚನೆ ಮಾಡಿದ್ದಾರೆ. ಅಗತ್ಯ ಪರಿಕರಗಳನ್ನು ಶಾಲೆಯಿಂದ ಒದಗಿಸಲಾಗಿದ್ದು ಸ್ವಯಂಸೇವಕರು ಶ್ರಮಸೇವೆ ನೀಡಿದ್ದಾರೆ.**





**ಶಾಲೆಯ ಆವರಣದಲ್ಲಿ ಸ್ವಚ್ಚತೆ, ನೀರಿನ ಪೈಪ್ ದುರಸ್ಥಿ ಕೆಲಸಗಳನ್ನು ಇದೇ ಸಂದರ್ಭದಲ್ಲಿ ಸ್ವಯಂಸೇವಕರು ಮಾಡಿರುತ್ತಾರೆ. ಶಾಲೆಯ ಶಿಕ್ಷಕರು, ಶಾಲಾಭಿವೃದ್ಧಿ ಸಮಿತಿಯ ಸದಸ್ಯರು, ಸ್ಥಳೀಯರು ಸ್ವಯಂಸೇವಕರ ಸೇವೆಗೆ ಮೆಚ್ಚುಗೆ ವ್ಯಕ್ತ ಪಡಿಸಿದ್ದಾರೆ.**

**ಶೌರ್ಯ**



ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಯೋಜನಾಧಿಕಾರಿ ನಾರಾಯಣ ಪಾಲನ್, ವಲಯ ಮೇಲ್ವಿಚಾರಕರಾದ ಸವಿತಾ ಸ್ವಯಂಸೇವಕರಿಗೆ ಮಾರ್ಗದರ್ಶನ ನೀಡಿರುತ್ತಾರೆ.

ಘಟಕದ ಸಂಯೋಜಕಿ ಉಮಾ, ಸ್ವಯಂಸೇವಕರಾದ ಮಹೇಶ, ಜಯರಾಮ, ಮಂಜುನಾಥ್, ಶಿನ ಪುಜಾರಿ, ಅಶೋಕ್, ಭಗೀರಥ, ರವಿ ಶ್ರಮದಾನ ನಡೆಸಿದರು.






ವರದಿ: ಜನಜಾಗೃತಿ ಪ್ರಾದೇಶಿಕ ವಿಭಾಗ